# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 671 (665) |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ. ಶಶೀಲ್ ಜಿ ನಮೋಶಿ (ಶಿಕ್ಷಕರ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 19.09.2022 |
| 4) | ಉತ್ತರಿಸುವವರು | ಮಾನ್ಯ ಉನ್ನತ ಶಿಕ್ಷಣ, ವಿದ್ಯುನ್ಮಾನ, ಐಟಿ-ಬಿಟಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು |

| ಪ್ರಶ್ನೆ | ಉತ್ತರ |
|---|---|
| (ಅ) ಕೌಶಲ್ಯಾಭಿವೃದ್ಧಿ ಇಲಾಖೆಯ ಜಾರಿಗೊಳಿಸುತ್ತಿರುವ ಯೋಜನೆ/ಕಾರ್ಯಕ್ರಮ ಯಾವುವು; ಫಲಾಪೇಕ್ಷಿಗಳ ಆಯ್ಕೆಗೆ ಅನುಸರಿಸುತ್ತಿರುವ ಮಾನದಂಡಗಳು ಯಾವುವು; (ಸಂಪೂರ್ಣ ಮಾಹಿತಿ ಒದಗಿಸುವುದು) | **<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)</u>**<br><br>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯನ್ನು ಹಾಗೂ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯನ್ನು ಜಾರಿಗೆ ತಂದಿದ್ದು, ರಾಜ್ಯದ ಯುವ ಜನತೆಗೆ ಅಲ್ಪಾವಧಿ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಉದ್ಯೋಗ ಕಲ್ಪಿಸುವ ಯೋಜನೆಗಳನ್ನು ಜಾರಿಗೊಳಿಸಲಾಗಿದೆ.<br><br>ಅದರಂತೆ ಸದರಿ ಯೋಜನೆಗಳಡಿ ಕನಿಷ್ಠ ವಯೋಮಾನವನ್ನು 18 ರಿಂದ 35 ವರ್ಷಗಳನ್ನು ನಿಗದಿಪಡಿಸಲಾಗಿದ್ದು, ಅನಕ್ಷರಸ್ಥರನ್ನು ಒಳಗೊಂಡಂತೆ ಕನಿಷ್ಠ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು ಸಹ ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ಪಡೆದು ಜೀವನ ನಡೆಸಲು ಶಕ್ತರಾಗುವಂತೆ ಉದ್ಯೋಗಾವಕಾಶ ಹಾಗೂ ಉದ್ಯಮಶೀಲತೆಗೆ ಅವಕಾಶವನ್ನು ಕಲ್ಪಿಸುವ ಮೂಲಕ ಹಾಗೂ ಸದರಿ ತರಬೇತಿದಾರರನ್ನು ಮುಖ್ಯವಾಹಿನಿಗೆ ತರಲು ಪ್ರಯತ್ನ ಮಾಡಲಾಗುತ್ತಿದೆ.<br><br>(ಕಾರ್ಯಕ್ರಮಗಳ ವಿವರ **ಅನುಬಂಧ -1** ರಲ್ಲಿ ನೀಡಲಾಗಿದೆ)<br><br>**<u>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ(ಸಿಡಾಕ್)</u>**<br><br>ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರವು ಆಸಕ್ತ 18 ವರ್ಷ ಮೀರಿದ ನಿರುದ್ಯೋಗ ಯುವಕ/ಯುವತಿಯರಿಗೆ ಹಾಗೂ ಕಿರು ಉದ್ಯಮಗಳನ್ನು ಪ್ರಾರಂಭಿಸಲು ಆಸಕ್ತಿ ಹೊಂದಿರುವವರಿಗೆ ಪತ್ರಿಕಾ ಪ್ರಕಟಣೆ ಹಾಗೂ ಇತರೆ ಮಾಧ್ಯಮಗಳ ಮೂಲಕ ಅರ್ಜಿಗಳನ್ನು ಅಹ್ವಾನಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಈ ಕೆಳಕಂಡ ತರಬೇತಿ ಪ್ರೇರಣಾ ಶಿಬಿರ ತಿಳುವಳಿಕೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>1. ಒಂದು ದಿನದ ಉದ್ಯಮಶೀಲತಾ ಪ್ರೇರಣಾ ಶಿಬಿರಗಳು<br>2. ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕಾ ಕಾರ್ಯಕ್ರಮಗಳು<br>3. ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮಗಳು<br>4. ಮೂವತ್ತು ದಿನಗಳ ವಲಯಾಧಾರಿತ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು |

| | |
|---|---|
| | **<u>ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್‌ಆರ್‌ಎಲ್‌ಎಂ)</u>**<br><br>ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಮೂಲಕ ಪ್ರಮುಖವಾಗಿ ಗ್ರಾಮೀಣ ಮಹಿಳೆಯರನ್ನು ಸಮುದಾಯ ಆಧಾರಿತ ಸಂಸ್ಥೆಗಳಡಿ ಸಂಘಟನೆ ಮಾಡುವ ಮೂಲಕ ಅವರಿಗೆ ಜೀವನೋಪಾಯ ಸ್ವಉದ್ಯೋಗಗಳನ್ನು ಕಲ್ಪಿಸುವ ಉದ್ದೇಶದಿಂದ ಈ ಕೆಳಗಿನಂತೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>**1. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ**<br>ಈ ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳುವಲ್ಲಿ ಮಹಿಳೆಯರು ಅವರು ಸ್ವಸಹಾಯ ಗುಂಪಿನ ಸದಸ್ಯತ್ವ ಪಡೆದಿರಬೇಕು. ಸದರ ಸ್ವಸಹಾಯ ಗುಂಪುಗಳು ವಾರ್ಡ್ ಮತ್ತು ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳ ವ್ಯಾಪ್ತಿಗೆ ಸೇರಿರಬೇಕು.<br><br>ಪ್ರಮುಖವಾಗಿ ಸ್ವಸಹಾಯ ಗುಂಪುಗಳ ಮಹಿಳೆಯರಿಗೆ ಪಂಚಸೂತ್ರಗಳ ಪಾಲನೆ, ಬ್ಯಾಂಕ್ ಸಂಪರ್ಕ, ಜೀವನೋಪಾಯ ಚಟುವಟಿಕೆಗಳು, ವಾರ್ಷಿಕ ಲೆಕ್ಕ ಪರಿಶೋಧನೆಇನ್ನೂ ಮುಂತಾದ ತರಬೇತಿಗಳನ್ನು ನೀಡುವುದರ ಮೂಲಕ ಗುಂಪುಗಳನ್ನು ಸುಸ್ಥಿರವಾಗಿಸಲು ಕ್ರಮವಹಿಸುವುದಾಗಿದೆ. ಇವುಗಳನ್ನು ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಮೂಲಕ ಸಂಘಟಿಸಲಾಗುವುದು.<br><br>ಸ್ವಸಹಾಯ ಗುಂಪುಗಳ ಈ ಕೆಳಕಂಡ ಮೂಲಗಳಿಂದ ಅನುದಾನದ ಸೌಲಭ್ಯವನ್ನು ಪಡೆಯಬಹುದಾಗಿದೆ.<br><br>• **ಸುತ್ತುನಿಧಿ** : ಸ್ವಸಹಾಯ ಗುಂಪಿನ ಮಹಿಳೆಯರಿಗೆ ಜೀವನೋಪಾಯ ಚಟುವಟಿಕೆ ಕೈಗೊಳ್ಳಲು ಹಾಗೂ ಹೆಚ್ಚಿನ ಬ್ಯಾಂಕ್ ಸಾಲ ಪಡೆಯಲು ಅನುಕೂಲ ಒದಗಿಸಿ ಅವರನ್ನು ಆರ್ಥಿಕವಾಗಿ ಸಬಲರಾಗುವಂತೆ ಮಾಡಲು ಅರ್ಹ ಗುಂಪುಗಳನ್ನು ಗುರ್ತಿಸಿ, ಶ್ರೇಣೀಕರಣ ಮಾಡಿ ಗರಿಷ್ಠ ರೂ.15000/-ಗಳನ್ನು ಸ್ವಸಹಾಯ ಗುಂಪುಗಳಿಗೆ ಒಂದು ಬಾರಿ ಅನುದಾನದ ರೂಪದಲ್ಲಿ ಒದಗಿಸುವುದು.<br><br>**1. ಸುತ್ತುನಿಧಿ ಒದಗಿಸಲು ಈ ಕೆಳಗಿನ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.**<br>• ಮಹಿಳಾ ಸ್ವ-ಸಹಾಯ ಗುಂಪುಗಳು ಕನಿಷ್ಠ 5 (ಬಿಪಿಎಲ್) ಬಡ ವರ್ಗದ ಸದಸ್ಯರನ್ನು ಒಳಗೊಂಡಿರಬೇಕು.<br>• ಬಡ ವರ್ಗದ ಸದಸ್ಯರೆಂದರೆ: ಆರ್‌ಎಸ್‌ಬಿವೈ ಕಾರ್ಡ್ ಹೊಂದಿರುವವರು. ಎ ಎ ವೈ / ಬಿಪಿಎಲ್ ಪಡಿತರ ಚೀಟಿ ಹೊಂದಿರುವವರು.<br>• 2011 ಎಸ್‌ಇಸಿಸಿ ಸರ್ವೆಯಲ್ಲಿ ಸ್ವಯಂ ಸೇರ್ಪಡೆ(Auto Inclusion) ವ್ಯಾಪ್ತಿಗೆ ಬರುವವರು.<br>• ಕಳೆದ ಆರ್ಥಿಕ ವರ್ಷದಲ್ಲಿ ಎಮ್‌ಜಿಎನ್‌ಆರ್‌ಇಜಿಎ ಅಡಿಯಲ್ಲಿ 15 ದಿನ ಉದ್ಯೋಗ ಪೂರೈಸಿದ ಸದಸ್ಯರನ್ನು ಹೊಂದಿರುವ ಕುಟುಂಬದ ಮಹಿಳೆಯರು.<br>• ಸ್ವ ಸಹಾಯ ಗುಂಪು 'ಎ' ಮತ್ತು 'ಬಿ' ಶ್ರೇಣಿ ಪಡೆದಿರಬೇಕು. |

- ಪಂಚಸೂತ್ರಗಳನ್ನು ಕಡ್ಡಾಯವಾಗಿ ಅನುಸರಣೆ ಮಾಡುತ್ತಿರುವ ಗುಂಪುಗಳಾಗಿರಬೇಕು.
- ಈ ಹಿಂದೆ ಯಾವುದೇ ಸರ್ಕಾರಿ ಯೋಜನೆ/ ಎಸ್‌ಜಿಎಸ್‌ವೈ ಯೋಜನೆಯಿಂದ ಸುತ್ತು ನಿಧಿ ಪಡೆದಿರುವ ಗುಂಪುಗಳಿಗೆ ನೀಡುವಂತಿಲ್ಲ.

**ಸಮುದಾಯ ಬಂಡವಾಳ ನಿಧಿ:** (ಸಿ.ಐ.ಎಫ್) ಒಕ್ಕೂಟಗಳ ಸುಸ್ಥಿರತೆಯನ್ನು ಬೆಂಬಲಿಸಲು ಸಮುದಾಯ ಬಂಡವಾಳ ನಿಧಿಯನ್ನು ನೀಡಲಾಗುವುದು. ಸಮುದಾಯ ಬಂಡವಾಳ ನಿಧಿಯನ್ನು ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟಗಳ ಮೂಲಕ ಅರ್ಹ ಪ್ರತಿ ಸ್ವಸಹಾಯ ಗುಂಪುಗಳಿಗೆ ರೂ.150000/- ಗಳನ್ನು ಈ ಕೆಳಗಿನ ಮಾನದಂಡಗಳನ್ನು ಅನುಸರಿಸಿ ನೀಡಲಾಗುತ್ತಿದೆ.

- ಎಸ್.ಎಚ್.ಜಿಗಳು ವಾರ್ಡ್ ಮಟ್ಟದ ಒಕ್ಕೂಟದಲ್ಲಿ ಸದಸ್ಯರಾಗಿರಬೇಕು.
- ಎಸ್.ಎಚ್.ಜಿಗಳು ಆರಂಭಗೊಂಡು ಕನಿಷ್ಟ 6 ತಿಂಗಳನ್ನು ಪೂರೈಸಿರಬೇಕು ಹಾಗೂ ಗುಂಪಿನ ಹೆಸರಿನಲ್ಲಿ ಬ್ಯಾಂಕ್‌ಖಾತೆ ಹೊಂದಿರಬೇಕಾಗಿರುತ್ತದೆ.
- ಪಂಚಸೂತ್ರಗಳನ್ನು ಕಡ್ಡಾಯವಾಗಿ ಪಾಲಿಸುತ್ತಿರಬೇಕು.
- ಶ್ರೇಣೀಕರಣದಲ್ಲಿ "ಎ" ಮತ್ತು "ಬಿ" ಶ್ರೇಣಿ ಪಡೆದಿರಬೇಕು.
- ಕಿರು ಬಂಡವಾಳ ಹೂಡಿಕೆ (ಎಮ್‌ಐಪಿ) ಯೋಜನೆಯು ಜಿ.ಪಿ.ಎಲ್.ಎಫ್ ಉಪ ಸಮಿತಿಯಿಂದ ಪರಿಶೀಲನೆಗೊಂಡಿರಬೇಕು.
- ನಂತರ ಎಮ್‌ಐಪಿಯು ಜಿ.ಪಿ.ಎಲ್.ಎಫ್ ಇ.ಸಿ ಸಮಿತಿಯ ಅನುಮೋದನೆ ಪಡೆದಿರಬೇಕು.
- ಉಪಸಮಿತಿಯಿಂದ ಪರಿಶೀಲನೆಗೊಂಡು ಅನುಮೋದನೆ ಪಡೆದ /ಕ್ರಮವಾಗಿರುವ ಬಗ್ಗೆ ಧೃಡಪಡಿಸಿಕೊಂಡ ನಂತರ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟದ ಕಾರ್ಯಕಾರಿ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯುವುದು.
- ಸಂಜೀವಿನಿ ಸಂಸ್ಥೆಯ 4ನೇ ಕಾರ್ಯಕಾರಿ ಸಮಿತಿಯಲ್ಲಿ ತೀರ್ಮಾನಿಸಿದಂತೆ ಕನಿಷ್ಟ 5 ಬಡವರ್ಗದ ಸದಸ್ಯರನ್ನು ಹೊಂದಿರಬೇಕು.
- ಏಳು ಹಂತಗಳ ಕಿರು ಬಂಡವಾಳ ಹೂಡಿಕೆ ಯೋಜನೆಯನ್ನು ತಯಾರಿಸಿರಬೇಕು.

**2. ದೀನ ದಯಾಳ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯ–**

ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು(60:40) ರಾಜ್ಯದಲ್ಲಿ 2013-14ನೇ ಸಾಲಿನಿಂದ ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯಡಿ 18 ರಿಂದ 35 ವಯೋಮಾನದ ಗ್ರಾಮೀಣ ಯುವಕ ಯುವತಿಯರನ್ನು ಗುರುತಿಸಿ ಅವರುಗಳ ವಿದ್ಯಾರ್ಹತೆಗನುಗುಣವಾಗಿ (8ನೇ ತರಗತಿ ಮೇಲ್ಪಟ್ಟು) ಕಂಪ್ಯೂಟರ್, ಹಾಸ್ಪಿಟಾಲಿಟಿ, ಡಾಟಾಎಂಟ್ರಿ, ಪ್ರವಾಸೋದ್ಯಮ, ಮೆಕಾನಿಕ್, ನರ್ಸಿಂಗ್, ಸೆಕ್ಯೂರಿಟಿ ಸರ್ವಿಸಸ್, ಟೈಲರಿಂಗ್ ಇತ್ಯಾದಿಯಾಗಿ ವಿವಿಧ ಕ್ಷೇತ್ರಗಳಲ್ಲಿ ಕನಿಷ್ಠ 3 ತಿಂಗಳುಗಳಿಂದ ಒಂದು ವರ್ಷದವರೆಗೆ ಉಚಿತ ವಸತಿಯೊಂದಿಗಿನ ಶ್ರೇಷ್ಠ ಗುಣಮಟ್ಟದ ಕೌಶಲ್ಯತರಬೇತಿ ನೀಡಿ ಕಡ್ಡಾಯವಾಗಿ ಉದ್ಯೋಗ ಒದಗಿಸುವ ಏಕೈಕ ಯೋಜನೆಯಾಗಿದೆ.

ಈ ಕೆಳಗಿನ ಮಾನದಂಡಗಳನ್ನು ಹೊಂದಿರಬೇಕು.

- ಗ್ರಾಮೀಣ ಪ್ರದೇಶದಯುವಕ/ಯುವತಿಯರಾಗಿರಬೇಕು
- 18 ರಿಂದ 35 ವಯೋಮಾನದವರಾಗಿರಬೇಕು,
- ಕನಿಷ್ಠ 10ನೇ ತರಗತಿಯವರೆಗೆ ಉತ್ತೀರ್ಣ / ಅನುತ್ತೀರ್ಣ ಆಗಿರಬೇಕು.
- ಬಿ.ಪಿ.ಎಲ್‌ಕಾರ್ಡ ಹೊಂದಿರಬೇಕು.

3. **ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ:** ಸದರಿ ತರಬೇತಿಯ ಸಂಸ್ಥೆಯ ಮೂಲಕ ಗ್ರಾಮೀಣ ನಿರುದ್ಯೋಗ ಯುವಕ/ಯುವತಿಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ತರಬೇತಿಯನ್ನು ನೀಡಲಾಗುತ್ತಿದೆ. ಸದರಿ ತರಬೇತಿಯಲ್ಲಿ ಸ್ವ-ಉದ್ಯೋಗ ಕೈಗೊಳ್ಳಬೇಕಾಗಿರುವ ಅಗತ್ಯ ಮಾಹಿತಿ, ಯೋಜನಾ ವರದಿ, ಮಾರ್ಕೆಟ ಆಯ್ಕೆ ಸಂಬಂದಿಸಿದಂತೆ ತರಬೇತಿಯನ್ನು ನೀಡಲಾಗುತ್ತಿದೆ. ತರಬೇತಿಯ ಸಂದರ್ಭದಲ್ಲಿ ಶೀಭಿರಾರ್ಥಿಗಳಿಗೆ ಸಮವಸ್ತ್ರ ನೀಡಲಾಗುತ್ತದೆ.

ಈ ಕೇಳಗಿನ ಮಾನದಂಡಗಳನ್ನು ಹೊಂದಿರಬೇಕು,

- ಗ್ರಾಮೀಣ ಪ್ರದೇಶದ ಯುವಕ/ಯುವತಿಯರಾಗಿರಬೇಕು,
- 18 ರಿಂದ 45 ವಯೋಮಾನದವರಾಗಿರಬೇಕು,
- ಕನಿಷ್ಠ 7ನೇ ತರಗತಿವರಿಗೆಓದಿರಬೇಕು,
- ಆಧಾರಕಾರ್ಡ ಮತ್ತು ಬಿ.ಪಿ.ಎಲ್‌ಕಾರ್ಡ ಹೊಂದಿರಬೇಕು.

**<u>ದೀನ ದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಡೇ-ನಲ್ಮ್)</u>**

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಡೇ-ಎನ್‌ಯುಎಲ್‌ಎಂ ಅಭಿಯಾನದಡಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿರುತ್ತದೆ.

1) **ಸಾಮಾಜಿಕ ಕ್ರೋಢೀಕರಣ ಮತ್ತು ಸಾಂಸ್ಥಿಕ ಅಭಿವೃದ್ಧಿ:-**

ಸದರಿ ಉಪಘಟಕದಡಿ ಮಹಿಳಾ ಸ್ವ-ಸಹಾಯ ಸಂಘ, ಪ್ರದೇಶ ಮಟ್ಟದ ಒಕ್ಕೂಟಗಳ ರಚನೆ ಹಾಗೂ ಸ್ವ-ಸಹಾಯ ಸಂಘಗಳಿಗೆ ರೂ.10,000/- ಮತ್ತು ಒಕ್ಕೂಟಗಳಿಗೆ ರೂ.50,000/- ಆವರ್ತಕ ನಿಧಿ ವಿತರಣೆ ಹಾಗೂ ಸಂಘ ಮತ್ತು ಒಕ್ಕೂಟದ ಸದಸ್ಯರುಗಳಿಗೆ ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

2) **ಸ್ವಯಂ ಉದ್ಯೋಗ ಕಾರ್ಯಕ್ರಮ:**

ಸದರಿ ಉಪಘಟಕದಡಿ ವೈಯಕ್ತಿಕ ಕಿರು ಉದ್ದಿಮೆ, ಗುಂಪು ಕಿರು ಉದ್ದಿಮೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ಗೆ ಸಂಬಂಧಿಸಿದಂತೆ ಕ್ರಮವಾಗಿ ಬ್ಯಾಂಕಿನಿಂದ ರೂ.2.00, ರೂ.10.00 ಲಕ್ಷ ಮತ್ತು ರೂ.1.00 ಲಕ್ಷವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು. ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು ಹಾಗೂ

| | |
|---|---|
| | ಸ್ವ-ಸಹಾಯ ಸಂಘಗಳು ನಿಯಮಿತವಾಗಿ ಸಾಲವನ್ನು ಮರು ಪಾವತಿಸಿದರೆ ಶೇ.3 ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ ನೀಡಲಾಗುವುದು ಹಾಗೂ ಉದ್ಯಮಶೀಲತಾ ತರಬೇತಿಯನ್ನು ನೀಡಲಾಗುತ್ತಿದೆ.<br><br>3) **ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ:**<br>ಸದರಿ ಉಪಘಟಕದಡಿ ನಗರದ ನಿರುದ್ಯೋಗ ಯುವಕ / ಯುವತಿಯರಿಗೆ ವಿವಿಧ ಉದ್ಯೋಗಾಧಾರಿತ ಕೌಶಲ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಿ, ಪ್ರಮಾಣೀಕರಣ ಮತ್ತು ಮೌಲ್ಯಮಾಪನವನ್ನು ಕೈಗೊಂಡು, ಕೇಂದ್ರ ಸರ್ಕಾರದ ಪ್ರಮಾಣ ಪತ್ರವನ್ನು ನೀಡಿ, ತರಬೇತಿಯನ್ನು ಪಡೆದುಕೊಂಡ ಶೇ.70 ರಷ್ಟು ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗ ಅಥವಾ ವೇತನಾಧಾರಿತ ಉದ್ಯೋಗವನ್ನು ಕಲ್ಪಿಸಲಾಗುತ್ತಿದೆ.<br><br>**4)ನಗರದ ವಸತಿ ರಹಿತರಿಗೆ ಆಶ್ರಯ:**<br>ಸದರಿ ಉಪಘಟಕದಡಿ ನಗರದ ವಸತಿ ರಹಿತರನ್ನು ರ್‍ಯಾಪಿಡ್ ಸಮೀಕ್ಷೆಯ ಮೂಲಕ ಗುರುತಿಸಿ, ಆಶ್ರಯವನ್ನು ಕಲ್ಪಿಸಲಾಗುತ್ತಿದೆ.<br><br>**5)ನಗರದ ಬೀದಿ ವ್ಯಾಪಾರಸ್ಥರಿಗೆ ಬೆಂಬಲ:**<br>ಸದರಿ ಉಪಘಟಕದಡಿ ನಗರದ ಬೀದಿ ವ್ಯಾಪಾರಸ್ಥರನ್ನು ಗುರುತಿಸಿ, ಗುರುತಿನ ಚೀಟಿ ಮತ್ತು ಮಾರಾಟ ಪ್ರಮಾಣ ಪತ್ರವನ್ನು ವಿತರಿಸಲಾಗುತ್ತಿದೆ.<br><br>**6)ಸಾಮರ್ಥ್ಯ ಅಭಿವೃದ್ಧಿ ಮತ್ತು ತರಬೇತಿ:**<br>ಸದರಿ ಉಪಘಟಕದಡಿ ಅಭಿಯಾನವನ್ನು ಅನುಷ್ಠಾನಗೊಳಿಸಲು ತೊಡಗಿಸಿಕೊಂಡಿರುವ ಅಧಿಕಾರಿ / ಸಿಬ್ಬಂದಿಗಳಿಗೆ ವಿವಿಧ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ.<br><br>**ಫಲಾಪೇಕ್ಷಿಗಳ ಆಯ್ಕೆಗೆ ಅನುಸರಿಸುತ್ತಿರುವ ಮಾನದಂಡಗಳು:**<br>1. ನಗರದ ವ್ಯಾಪ್ತಿಯ ಅರ್ಹ ಬಡ ಫಲಾನುಭವಿಗಳಾಗಿರಬೇಕು.<br>2. ಫಲಾನುಭವಿಗಳ ಕುಟುಂಬದ ವಾರ್ಷಿಕ ಆದಾಯ ರೂ.1.20 ಲಕ್ಷದ ಒಳಗಿರಬೇಕು.<br>3. ಈ ಕೆಳಕಂಡ ದಾಖಲಾತಿಗಳನ್ನು ಪರಿಗಣಿಸಲಾಗುವುದು.<br>• ಬಡತನ ರೇಖೆಗಿಂತ ಕೆಳಗಿರುವ ಫಲಾನುಭವಿಗಳೆಂದು ಗುರುತಿಸಲು ರೇಷನ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಮತ್ತು ಆಧಾರ್ ಕಾರ್ಡ್.<br>4. ಕೌಶಲ್ಯ ತರಬೇತಿಗೆ 16 ರಿಂದ 45 ವರ್ಷ ವಯೋಮಾನ ಒಳಗಿರಬೇಕು ಹಾಗೂ ಕೇಂದ್ರ ಸರ್ಕಾರವು ತರಬೇತಿ ವಿಷಯವಾರು ನಿಗದಿಪಡಿಸಿದ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು. |

(ಆ) ಈ ಯೋಜನೆ ಕಾರ್ಯಕ್ರಮಗಳಿಂದ ಉದ್ಯೋಗ ಸೃಷ್ಟಿಗೆ ಅವಕಾಶ ಕಲ್ಪಿಸಲಾಗಿದೆಯೇ; (ಸಂಪೂರ್ಣ ವಿವರ ನೀಡುವುದು)

**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)**

ಹೌದು.

ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಗಳಡಿ ಅಲ್ಪಾವಧಿ ತರಬೇತಿ ಪಡೆದ ಶೇ 70 ರಷ್ಟು ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವ ಷರತ್ತನ್ನು ತರಬೇತುದಾರ ಸಂಸ್ಥೆಗಳಿಗೆ ವಿಧಿಸಲಾಗಿದ್ದು, ಅದರಂತೆ ಉದ್ಯೋಗಾವಕಾಶ ಕಲ್ಪಿಸಲಾಗುತ್ತಿದೆ ರಾಜ್ಯದ ಎಲ್ಲಾ ಯುವ ಜನರಿಗೆ ಉದ್ಯೋಗ ದೊರಕಿಸುವ ನಿಟ್ಟಿನಲ್ಲಿ, ವರ್ಚುಯಲ್ ಜಾಬ್ ಮೇಳಗಳನ್ನು ನಡೆಸಲಾಗಿದೆ ಹಾಗೂ ಎಲ್ಲಾ ಜಿಲ್ಲೆಗಳಲ್ಲಿ ಮಿನಿ ಉದ್ಯೋಗ ಮೇಳಗಳನ್ನು ಏರ್ಪಡಿಸಿ, ವಿವಿಧ ಕಂಪನಿಗಳನ್ನು ಅಹ್ವಾನಿಸಿ ಉದ್ಯೋಗ ಕಲ್ಪಿಸಿ ಕೊಡಲಾಗಿದೆ ಮತ್ತು ಹಲವಾರು ಕೈಗಾರಿಕಾ ಸಂಸ್ಥೆ / ಸಂಘಗಳೊಂದಿಗೆ (ಉದಾ: ELCIA/Filpkart-Instrakart/ Mysore Industrial Association, ESDM Cluster, Mysore & ಇತರೆ) ಒಡಂಬಡಿಕೆಯನ್ನು ಮಾಡಿಕೊಂಡಿದ್ದು, ತರಬೇತುದಾರ ಸಂಸ್ಥೆಗಳೊಂದಿಗೆ ಹೆಚ್ಚಿನ ಕೌಶಲ್ಯಾಧಾರಿತ ತರಬೇತಿಯೊಂದಿಗೆ ಉದ್ಯೋಗ ದೊರಕಿಸುವ ಕ್ರಮವನ್ನು ಕೈಗೊಳ್ಳಲಾಗಿದೆ.ತರಬೇತಿ ಪಡೆದ ಅಭ್ಯರ್ಥಿಗಳು ಹಾಗೂ ಕೈಗಾರಿಕೋದ್ಯಮಿಗಳನ್ನು ಒಂದೇಡೆ ಸೇರಿಸಿ, ಉದ್ಯೋಗ ದೊರಕಿಸಿ ಕೊಡುವ ನಿಟ್ಟಿನಲ್ಲಿ Skillconnect portal ನ್ನು ಅಭಿವೃದ್ಧಿ ಪಡಿಸಿ, ಉದ್ಯೋಗ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿರುತ್ತದೆ.

**ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ(ಸಿಡಾಕ್)**

ಸಿಡಾಕ್ ಸಂಸ್ಥೆಯಿಂದ ಕಿರು ಉದ್ಯಮೆಯನ್ನು ಸ್ಥಾಪಿಸಲು ಅಭ್ಯರ್ಥಿಗಳಿಗೆ ಉದ್ಯಮಶೀಲತಾಭಿವೃದ್ಧಿ ತರಬೇತಿ ನೀಡಲಾಗುವುದು ಇದರಿಂದ ಸ್ವ-ಉದ್ಯಮೆಗಳನ್ನು ಸ್ಥಾಪಿಸಲು ಮತ್ತು ಉದ್ಯೋಗ ಸೃಷ್ಟಿಸಲು ಅವಕಾಶವಾಗುತ್ತಿದೆ.

ಮುಂದುವರೆದು, ಕಳೆದ ಮೂರು ವರ್ಷಗಳಲ್ಲಿ ಉದ್ಯಮಶೀಲತಾಭಿವೃದ್ಧಿ ತರಬೇತಿ ಪಡೆದು ಉದ್ಯಮಗಳನ್ನು ಸ್ಥಾಪಿಸಿದ ಅಭ್ಯರ್ಥಿಗಳಿಂದ ಈ ಕೆಳಗಿನಂತೆ ಉದ್ಯೋಗ ಸೃಷ್ಟಿಯಾಗಿರುತ್ತದೆ.

| ವರ್ಷ | ಉದ್ಯೋಗ ಸೃಷ್ಟಿ |
|---|---|
| 2019–20 | 418 |
| 2020–21 | 234 |
| 2021–22 | 295 |

**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್‌ಆರ್‌ಎಲ್‌ಎಂ)**

ಪ್ರಮುಖವಾಗಿ, ಸ್ವಸಹಾಯ ಗುಂಪುಗಳ ಸದಸ್ಯರುಗಳಿಗೆ ಭಾರತ ಸರ್ಕಾರದ ಮಾರ್ಗಸೂಚಿಗಳಂತೆ ಬಡತನ ಸಮಸ್ಯೆಯಿಂದ ಹೊರಬರಲು ಹಾಗೂ ಕುಟುಂಬದ ಆರ್ಥಿಕ ಪ್ರಗತಿಗಾಗಿ ಜೀವನೋಪಾಯ ಸ್ವ ಉದ್ಯೋಗಗಳನ್ನು ಕೈಗೊಳ್ಳಲು ಸಮುದಾಯ ಬಂಡವಾಳ ನಿಧಿ, ಸುತ್ತು ನಿಧಿ, ಬ್ಯಾಂಕ್ ಲಿಂಕೇಜ್ ಸೌಲಭ್ಯಗಳನ್ನು ಒದಗಿಸಿ ಅವರು ಉತ್ಪಾದಿಸುತ್ತಿರುವ ಉತ್ಪನ್ನಗಳಿಗೆ ಉತ್ತಮವಾದ ಬ್ರ್ಯಾಂಡಿಂಗ್, ಪ್ಯಾಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ. ಜಿಲ್ಲಾ ಹಾಗೂ ತಾಲ್ಲೂಕುಗಳಲ್ಲಿ ಮಾಸಿಕ ಸಂತೆ, ಸರಸ್ ಮೇಳದಲ್ಲಿ ಭಾಗವಹಿಸಲು ಅನುಕೂಲ ಒದಗಿಸುವ ನರೇಗಾ ಯೋಜನೆ

| | |
|---|---|
| | ಸೇರಿದಂತೆ ಇತರೆ ಇಲಾಖೆಗಳಡಿ ದೊರೆಯುವ ಸೌಲಭ್ಯಗಳನ್ನು ಒಗ್ಗೂಡಿಸುವಿಕೆ ವೇದಿಕೆಯಡಿ ಉದ್ಯೋಗಗಳನ್ನು ಸೃಷ್ಟಿಸಿ ಅನುಕೂಲ ಕಲ್ಪಿಸಲಾಗುತ್ತಿದೆ.<br><br>ಸ್ವಸಹಾಯ ಗುಂಪಿನ ಸದಸ್ಯರು ಉತ್ಪಾದಿಸುತ್ತಿರುವ ಉತ್ಪನ್ನಗಳಿಗೆ ಉತ್ತಮವಾದ ಬ್ರ್ಯಾಂಡಿಂಗ್, ಪ್ಯಾಕಿಂಗ್ ತಂತ್ರಜ್ಞಾನ ತರಬೇತಿ, ಅವರ ಉತ್ಪನ್ನಗಳಿಗೆ ಜಿಲ್ಲಾ ಹಾಗೂ ತಾಲ್ಲೂಕುಗಳಲ್ಲಿ ಮಾಸಿಕ ಸಂತೆ, ಸರಸ್ ಮೇಳದಲ್ಲಿ ಭಾಗವಹಿಸಲು ಅನುಕೂಲ ಒದಗಿಸುವ ಮೂಲಕ ಒಂದಕ್ಕಿಂತ ಹೆಚ್ಚಿನ ಜೀವನೋಪಾಯ ಚಟುವಟಿಕೆ ಕೈಗೊಂಡು ನಿರುದ್ಯೋಗ ಹಾಗೂ ಬಡತನ ಸಮಸ್ಯೆಗಳಿಂದ ಮುಕ್ತಗೊಳಿಸಲು ನಿರಂತರ ಕ್ರಮ ಜರುಗಿಸಲಾಗುತ್ತಿದೆ.<br><br>ಡಿಡಿಯುಜಿಕೆವೈ ಮತ್ತು ಆರ್‌ಸೆಟಿ ಯೋಜನೆಗಳಡಿ ಕೌಶಲ್ಯ ತರಬೇತಿಗಳನ್ನು ಹಮ್ಮಿಕೊಳ್ಳುವುದಷ್ಟೆಯಲ್ಲದೇ ಉದ್ಯೋಗ ಮೇಳಗಳನ್ನು ಹಮ್ಮಿಕೊಂಡು ನಿರುದ್ಯೋಗ ಸಮಸ್ಯೆ ನಿವಾರಿಸಲು ಕ್ರಮ ಜರುಗಿಸಲಾಗುತ್ತಿದೆ.<br><br>**<u>ದೀನ ದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಡೇ-ನಲ್ಮ್)</u>**<br><br>ಡೇ-ನಲ್ಮ್ ಅಭಿಯಾನದಡಿ ಉದ್ಯೋಗ ಸೃಷ್ಟಿಗೆ ಅವಕಾಶ ಇರುವುದಿಲ್ಲ ಬದಲಾಗಿ, ಈ ಕೆಳಕಂಡಂತೆ ಅವಕಾಶಗಳು ಇರುತ್ತವೆ.<br><br>**1)ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳನಿಯುಕ್ತಿ** ಉಪಘಟಕದಡಿ ತರಬೇತಿಯನ್ನು ಪಡೆದುಕೊಂಡ ಫಲಾನುಭವಿಗಳಿಗೆ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಸ್ವಯಂ ಉದ್ಯೋಗ ಮತ್ತು ವೇತನಾಧಾರಿತ ಉದ್ಯೋಗವನ್ನು ಒದಗಿಸಲಾಗುತ್ತಿದೆ.<br><br>2) **ಸ್ವಯಂ ಉದ್ಯೋಗ ಕಾರ್ಯಕ್ರಮ:-**<br><br>ಸದರಿ ಉಪಘಟಕದಡಿ ವೈಯಕ್ತಿಕ ಕಿರು ಉದ್ದಿಮೆ, ಗುಂಪು ಕಿರು ಉದ್ದಿಮೆ ಹಾಗೂ ಎಸ್‌ಹೆಚ್‌ಜಿ ಬ್ಯಾಂಕ್ ಕ್ರೆಡಿಟ್ ಲಿಂಕೇಜ್‌ಗೆ ಸಂಬಂಧಿಸಿದಂತೆ ಕ್ರಮವಾಗಿ ಬ್ಯಾಂಕಿನಿಂದ ರೂ.2.00, ರೂ.10.00 ಲಕ್ಷ ಮತ್ತು ರೂ.1.00 ಲಕ್ಷವರೆಗೆ ಬ್ಯಾಂಕಿನಿಂದ ಸಾಲ ಸೌಲಭ್ಯವನ್ನು ಕಲ್ಪಿಸಲಾಗುವುದು. ಶೇ.7 ಕ್ಕಿಂತ ಮೇಲ್ಪಟ್ಟ ಬಡ್ಡಿ ಸಹಾಯಧನವನ್ನು ಯೋಜನೆಯಿಂದ ಭರಿಸಿ ಪಾವತಿಸಲಾಗುವುದು ಹಾಗೂ ಸ್ವ-ಸಹಾಯ ಸಂಘಗಳು ನಿಯಮಿತವಾಗಿ ಸಾಲವನ್ನು ಮರು ಪಾವತಿಸಿದರೆ ಶೇ.3 ರಷ್ಟು ಹೆಚ್ಚುವರಿ ಬಡ್ಡಿ ಸಹಾಯಧನ ನೀಡಲಾಗುವುದು ಹಾಗೂ ಉದ್ಯಮಶೀಲತಾ ತರಬೇತಿಯನ್ನು ನೀಡಲಾಗುತ್ತಿದೆ. |
| (ಇ) ಕಳೆದ 3 ವರ್ಷಗಳಿಂದ ಇಲಾಖಾ ವತಿಯಿಂದ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಕೈಗೊಂಡಿರುವ ಯೋಜನೆ/ಕಾರ್ಯಕ್ರಮಗಳು ಯಾವುವು; ಬಿಡುಗಡೆಯಾದ ಮತ್ತು ಬಳಿಕ ಮಾಡಲಾದ ಅನುದಾನ ಎಷ್ಟು; (ಕಾರ್ಯಕ್ರಮ/ಯೋಜನೆವಾರು ವಿವರ ನೀಡುವುದು) | **<u>ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)</u>**<br><br>ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಿಗೆ ಪ್ರತ್ಯೇಕವಾಗಿ ಯಾವುದೇ ಯೋಜನೆಗಳನ್ನು ಜಾರಿಗೊಳಿಸಲಾಗಿರುವುದಿಲ್ಲ. ಆದಗ್ಯೂ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ಕೇಂದ್ರ ಸರ್ಕಾರದ ಪ್ರಧಾನಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಯನ್ನು ಹಾಗೂ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯನ್ನು ಜಾರಿಗೆ ತಂದಿದ್ದು, ರಾಜ್ಯದ ಯುವ ಜನತೆಗೆ ಅಲ್ಪಾವಧಿ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಉದ್ಯೋಗ ಕಲ್ಪಿಸುವ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. |

ಸದರ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಿಗೆ ಈ ಕೆಳಕಂಡಂತೆ ಅನುದಾನವನ್ನು ತರಬೇತಿ ವೆಚ್ಚದ ರೂಪದಲ್ಲಿ ಪಾವತಿಸಲಾಗಿರುತ್ತದೆ.

| ಕ್ರಮ ಸಂಖ್ಯೆ | ಆರ್ಥಿಕ ವರ್ಷ | ಬಿಡುಗಡೆ ಮಾಡಲಾದ ಅನುದಾನ (ತರಬೇತಿ ವೆಚ್ಚ ಸೇರಿ) (ರೂ.ಲಕ್ಷಗಳಲ್ಲಿ) | ಬಳಕೆ ಮಾಡಲಾದ ಅನುದಾನ (ತರಬೇತಿ ವೆಚ್ಚ ಸೇರಿ) (ರೂ.ಲಕ್ಷಗಳಲ್ಲಿ) |
|---|---|---|---|
| 01 | 2019–20 | 412 | 412 |
| 02 | 2020–21 | 966 | 966 |
| 03 | 2021–22 | 1603 | 1603 |

**ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ(ಸಿಡಾಕ್)**

ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ದ ವತಿಯಿಂದ ಕಿರು ಉದ್ಯಮೆಗಳನ್ನು ಸ್ಥಾಪಿಸಲು (Micro Enterprineurs) ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಕೈಗೊಂಡಿರುವ ಯೋಜನೆ / ಕಾರ್ಯಕ್ರಮಗಳು ಬಿಡುಗಡೆಯಾದ ಮತ್ತು ಬಳಕೆಯಾದ ಅನುದಾನದ ವಿವರಗಳು ಕೆಳಗಿನಂತಿವೆ.

| ವರ್ಷ | ತರಬೇತಿ / ಕಾರ್ಯಕ್ರಮ ವಿವರ | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) | ಬಳಕೆಯಾದ ಅನುದಾನ (ರೂ.ಲಕ್ಷಗಳಲ್ಲಿ) |
|---|---|---|---|
| 2019–20 | 1) ಒಂದು ದಿನದ ಕೌಶಲ್ಯ ಉದ್ಯೋಗ ಔಟ್ ರೀಚ್ ಹಾಗೂ ಪ್ರೇರಣಾ ತರಬೇತಿ | 11.56 | 11.56 |
| | 2) ಎರಡು/ಮೂರು ದಿನಗಳ ದಿಶಾ ರೆಡಿ / ಸ್ಟಡಿ ಕಾರ್ಯಕ್ರಮ | 3.28 | 3.28 |
| | 3) ಅರು ದಿನಗಳ ಕೌಶಲ್ಯ ಉದ್ಯೋಗ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ | 13.55 | 13.55 |
| | 4) ಆರು ದಿನಗಳ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಕೌಶಲ್ಯ ಉದ್ಯೋಗ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ | 5.30 | 5.30 |
| | **ಒಟ್ಟು** | **33.69** | **33.69** |
| 2020–21 | 1) ಆರು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ | 1.35 | 1.35 |

| | | | |
|---|---|---|---|
| | 2) ಮೂವತ್ತು ದಿನಗಳ ವಲಯಾಧಾರಿತ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳು | 22.50 | 22.50 |
| | 2) ಪರಿಶಿಷ್ಟಜಾತಿಯ ಅಭ್ಯರ್ಥಿಗಳಿಗೆ ಮೂವತ್ತು ದಿನಗಳ ವಲಯಾಧಾರಿತ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ | 3.80 | 3.80 |
| | ಒಟ್ಟು | **27.65** | **27.65** |
| 2021–22 | 1) ಒಂದು ದಿನದ ಉದ್ಯಮಶೀಲತಾ ಪ್ರೇರಣಾ ಶಿಬಿರ | 1.92 | 1.92 |
| | 2) ಮೂರು ದಿನಗಳ ಉದ್ಯಮಶೀಲತಾ ತಿಳುವಳಿಕೆ ಕಾರ್ಯಕ್ರಮ (ಅಂತಿಮ ವರ್ಷದ ಡಿಗ್ರಿ ಕಾಲೇಜ ವಿದ್ಯಾರ್ಥಿಗಳಿಗೆ) | 6.00 | 6.00 |
| | 3) ಹತ್ತು ದಿನಗಳ ಉದ್ಯಮಶೀಲತಾಭಿವೃದ್ಧಿ ಕಾರ್ಯಕ್ರಮ | 7.35 | 7.35 |
| | 4) ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಮೂವತ್ತು ದಿನಗಳ ವಲಯಾಧಾರಿತ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ | 2.80 | 2.80 |
| | 5) ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ಮೂವತ್ತು ದಿನಗಳ ವಲಯಾಧಾರಿತ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮ | 2.50 | 2.50 |
| | **ಒಟ್ಟು** | **20.57** | **20.57** |

**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್ಆರ್ಎಲ್ಎಂ)**

ಕಳೆದ 3 ವರ್ಷಗಳಿಂದ ಇಲಾಖಾ ವತಿಯಿಂದ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಕೈಗೊಂಡಿರುವ ಯೋಜನೆ/ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಮತ್ತು ಬಳಕೆ ಮಾಡಲಾದ ಅನುದಾನದ ವಿವರ ಅನುಬಂಧ–2ರಲ್ಲಿ ಲಗತ್ತಿಸಿದೆ.

**ದೀನ ದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಡೇ–ನಲ್ಮ್)**

ಅನುಬಂಧ–3ರಲ್ಲಿ ಲಗತ್ತಿಸಿದೆ.

(ಈ)ಈ ಯೋಜನೆ/ ಕಾರ್ಯಕ್ರಮಗಳನ್ನು ಸದುಪಯೋಗ ಪಡಿಸಿಕೊಂಡ ಫಲಾನುಭವಿಗಳ ಸಂಖ್ಯೆ ಎಷ್ಟು? (ವಿವರ ನೀಡುವುದು)

**ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮ (ಕೆ.ಎಸ್.ಡಿ.ಸಿ)**

ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ ಹಾಗೂ ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆಗಳಡಿ ಸದುಪಯೋಗ ಪಡಿಸಿಕೊಂಡ ಫಲಾನುಭವಿಗಳ ಸಂಖ್ಯೆ ಈ ಕೆಳಕಂಡಂತೆ ನೀಡಲಾಗಿದೆ.

| ಯೋಜನೆ | ಪ್ರಯೋಜನ ಪಡೆದಿರುವ ಫಲಾನಭವಿಗಳ ಸಂಖ್ಯೆ |
|---|---|
| ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆ | 68536 |
| ಪ್ರಧಾನ ಮಂತ್ರಿಗಳ ಕೌಶಲ್ಯ ವಿಕಾಸ ಯೋಜನೆ | 20589 |

**ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ(ಸಿಡಾಕ್)**

ಈ ಯೋಜನೆಗಳಡಿ ಉದ್ಯಮಶೀಲತಾಭಿವೃದ್ಧಿ ತರಬೇತಿ ಪಡೆದು ಒಟ್ಟು 5569 ಅಭ್ಯರ್ಥಿಗಳು ಸದುಪಯೋಗ ಪಡೆದುಕೊಂಡಿರುತ್ತಾರೆ.

**ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎನ್‌ಆರ್‌ಎಲ್‌ಎಂ)**

ಈ ಯೋಜನೆ/ಕಾರ್ಯಕ್ರಮಗಳನ್ನು ಸದುಪಯೋಗ ಪಡಿಸಿಕೊಂಡ ಫಲಾನುಭವಿಗಳ ಸಂಖ್ಯೆ ವಿವರಗಳನ್ನು ಅನುಬಂಧ–4ರಲ್ಲಿ ಲಗತ್ತಿಸಿದೆ.

**ದೀನ ದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಡೇ–ನಲ್ಮ್)**

**ಅನುಬಂಧ–5ರಲ್ಲಿ** ಲಗತ್ತಿಸಿದೆ.

ಸಂಖ್ಯೆ: ಕೌಉಜೀಇ 19 ಕೌಗುಪ್ರ 2022

(ಡಾ॥ ಸಿ.ಎನ್. ಅಶ್ವಥ್‌ನಾರಾಯಣ)
ಉನ್ನತ ಶಿಕ್ಷಣ, ವಿದ್ಯುನ್ಮಾನ, ಐಟಿ–ಬಿಟಿ ಮತ್ತು
ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ,ಉದ್ಯಮಶೀಲತೆ
ಮತ್ತು ಜೀವನೋಪಾಯ ಇಲಾಖಾ ಸಚಿವರು.

## ಅನುಬಂಧ –1

### ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ರೂಪಿಸಿದ ಕಾರ್ಯಕ್ರಮಗಳ ವಿವರ :

- 2021–22 ನೇ ಸಾಲಿನಲ್ಲಿ ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸವಿನೆನಪಿಗಾಗಿ 15 ನೇ ಆಗಸ್ಟ್ 2021 ರ ಭಾಷಣದಲ್ಲಿ ಘೋಷಿಸಿದ ಅಮೃತ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಮೂಲಕ ಜಾರಿಗೊಳಿಸಲು ಆದೇಶಿಸಲಾಗಿದ್ದು, ಈ ಕಾರ್ಯಕ್ರಮದಡಿ ಒಟ್ಟಾರೆ 75000 ಅಭ್ಯರ್ಥಿಗಳಿಗೆ ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ನೀಡುವ ಗುರಿಯನ್ನು ಹೊಂದಲಾಗಿದೆ. ಪ್ರಸಕ್ತ 2021–22 ನೇ ಸಾಲಿನಲ್ಲಿ 38460 ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ, ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಉಚಿತ ಕೌಶಲ್ಯಾಧಾರಿತ ತರಬೇತಿ ನೀಡುವ ಗುರಿಯನ್ನು ಹೊಂದಲಾಗಿದ್ದು, ಈಗಾಗಲೇ 38460 ಅಭ್ಯರ್ಥಿಗಳಿಗೆ ತರಬೇತಿ ನೀಡಲು ಕಾರ್ಯಾದೇಶ ಹೊರಡಿಸಲಾಗಿದೆ. ಎಲ್ಲಾ ಅಭ್ಯರ್ಥಿಗಳಿಗೆ ತರಬೇತಿ ಕಾರ್ಯಕ್ರಮಗಳು ಪ್ರಾರಂಭವಾಗಿದ್ದು, ಮುಕ್ತಾಯಗೊಂಡಿರುತ್ತದೆ. 2022–23 ನೇ ಸಾಲಿಗೂ ಕೂಡ 36540 ಅಭ್ಯರ್ಥಿಗಳಿಗೆ ಅಮೃತ ಕೌಶಲ್ಯ ತರಬೇತಿ ಕಾರ್ಯಕ್ರಮದಡಿ ಉಚಿತ ಕೌಶಲ್ಯಾಧಾರಿತ ತರಬೇತಿಯನ್ನು ನೀಡುವ ಗುರಿ ಹೊಂದಲಾಗಿದೆ.
- <u>ಆರೋಗ್ಯ ವಲಯದ Crash Course ತರಬೇತಿ</u> : ಕೋವಿಡ್ – 19 ರ ಸಂಬಂಧ ಆರೋಗ್ಯ ವಲಯದಲ್ಲಿ ಅಗತ್ಯವಿರುವ ಕೌಶಲ್ಯಾಧಾರಿತ ಮಾನವ ಸಂಪನ್ಮೂಲ ದೊರಕಿಸಿಕೊಡಲು 6 ಜಾಬ್‌ರೋಲ್‌ಗಳಲ್ಲಿ Covid Crash Course ನ್ನು ಪ್ರಾರಂಭಿಸಲಾಗಿದೆ. ರಾಜ್ಯದ 8 ಜಿಲ್ಲೆಗಳಲ್ಲಿ ಈಗಗಲೇ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿದ್ದು, 74 ತರಬೇತಿ ಸಂಸ್ಥೆಗಳ ಮೂಲಕ 15000 ಅಭ್ಯರ್ಥಿಗಳ ತರಬೇತಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಅದರಂತೆ 11408 ತರಬೇತಿದಾರರಿಗೆ ತರಬೇತಿ ಪ್ರಾರಂಭವಾಗಿರುತ್ತದೆ. ಈ ಮೂಲಕ ಸಂಭಾವ್ಯ ಕೊವೀಡ್ 3 ನೇ ಅಲೆಗೆ ಸಂಬಂಧಿಸಿದಂತೆ ಸಿಬ್ಬಂದಿಗಳ ಕೊರತೆಯನ್ನು ನಿವಾರಿಸಲು ಕ್ರಮವಹಿಸಲಾಗಿದೆ.
- <u>ಪೂರ್ವಕಲಿಕೆಯ ಗುರುತಿಸುವಿಕೆ Recognition of Prior Learning (RPL)</u> : ಈ ಕಾರ್ಯಕ್ರಮದಡಿ ಒಟ್ಟು 6000 ಅಭ್ಯರ್ಥಿಗಳಿಗೆ ತರಬೇತಿ ನೀಡುವ ಗುರಿಯನ್ನು ಹೊಂದಲಾಗಿದ್ದು, 5572 ಅಭ್ಯರ್ಥಿಗಳಿಗೆ ಈಗಾಗಲೇ ತರಬೇತಿ ಕಾರ್ಯವು ಪೂರ್ಣಗೊಂಡಿರುತ್ತದೆ.
- ಸಂಕಲ್ಪ ಯೋಜನೆ : ಸಂಕಲ್ಪ ಯೋಜನೆಯಡಿ 500 ಐಟಿಐ/ ಡಿಪ್ಲೋಮಾ/ ಪದವಿ ಉಪನ್ಯಾಸಕರಿಗೆ ಅಧುನಿಕ ಸಂಭೋಧನಾ ಕೌಶಲ್ಯ ಹಾಗೂ 21st Century Skills, Communicative English Skills ತರಬೇತಿ ನೀಡಲಾಗುತ್ತಿದೆ.
- <u>ಆಂಗ್ಲ ಭಾಷಾ ಪ್ರಯೋಗಾಲಯಗಳು</u> : ಪ್ರಯೋಗಾಲಯಗಳನ್ನು ಆಯ್ಕೆಯಾದ ಯಾದಗಿರಿ, ಕೊಪ್ಪಳ, ಚಿತ್ರದುರ್ಗ, ಚಾಮರಾಜನಗರ ಮತ್ತು ಮಂಗಳೂರು ಜಿಲ್ಲೆಗಳ ಜಿಟಿಟಿಸಿ ಮತ್ತು ಐಟಿಐ ನ ಐದು ಭಾಷಾ ಪ್ರಯೋಗಾಲಯಗಳನ್ನು ನಿರ್ಮಿಸಿ ಪ್ರತಿ ಪ್ರಯೋಗಾಲಯದಿಂದ 200 ಅಭ್ಯರ್ಥಿಗಳಂತೆ ಒಟ್ಟು 1000 ಅಭ್ಯರ್ಥಿಗಳಿಗೆ ತರಬೇತಿ ನೀಡಲು ಮತ್ತು ಭಾಷಾ ತರಬೇತಿಯನ್ನು ಒದಗಿಸಲು ಕಾರ್ಯಾದೇಶವನ್ನು ನೀಡಲಾಗಿದೆ. ಯೋಜನೆಯ ಅನುಷ್ಠಾನವು ಪ್ರಗತಿಯಲ್ಲಿದೆ. ಕೊಪ್ಪಳ, ಯಾದಗಿರಿ, ಚಿತ್ರದುರ್ಗ, ಚಾಮರಾಜನಗರ, ಮಂಗಳೂರು, ಬೆಂಗಳೂರು (ಮಲ್ಲೇಶ್ವರಂ), ಮಂಡ್ಯ ಜಿಲ್ಲೆಗಳಲ್ಲಿ ಲ್ಯಾಬ್‌ಗಳನ್ನು ಸ್ಥಾಪಿಸಲಾಗಿದ್ದು, ಇಂಗ್ಲಿಷ್ ಭಾಷೆಯ ತರಬೇತಿಯನ್ನು ಪ್ರಾರಂಭಿಸಲಾಗಿದೆ.
- <u>Domain Skills Training</u> : ಎರಡು ವಿಭಿನ್ನ ವಲಯಗಳಲ್ಲಿ 400 ತರಬೇತುದಾರರಿಗೆ ತರಬೇತಿ ನೀಡಲು ಟಿ.ಟಿ ಪ್ರೊವೈಡರ್ ಕೌಶಲ್ಯಗಳಿಗಾಗಿ ಜಿಟಿಟಿಸಿ ಮತ್ತು ಕೆಜಿಟಿಟಿಐ ಯಿಂದ ಪ್ರಸ್ತಾವನೆಗಳನ್ನು ಸ್ವೀಕರಿಸಿದೆ. ರಾಜ್ಯದ ಜಿಲ್ಲೆಗಳಾದ್ಯಂತ ನಾಲ್ಕು ವಿಭಿನ್ನ ವಲಯಗಳಲ್ಲಿ 300 ತರಬೇತುದಾರರಿಗೆ ತರಬೇತಿ ನೀಡಲು ಜಿ.ಟಿ.ಟಿ.ಸಿ ಮತ್ತು ಕೆ.ಜಿ.ಟಿ.ಟಿ.ಐ ಸಂಸ್ಥೆಯವರಿಗೆ ಅನುದಾನ ಬಿಡುಗಡೆ ಮಾಡಲಾಗಿದೆ.
- <u>Localization of Content</u> : ಕೌಶಲ್ಯ ತರಬೇತಿಯ ವಿವಿಧ ಜಾಬ್‌ರೋಲ್‌ಗಳ ಪಠ್ಯಕ್ರಮ ಆಂಗ್ಲಬಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಗೊಳಿಸಲು ಕ್ರಮವಹಿಸಲಾಗಿದ್ದು, ಈಗಾಗಲೇ 16 ಜಾಬ್‌ರೋಲ್‌ಗಳ ಪಠ್ಯಕ್ರಮಗಳನ್ನು ಮತ್ತು ಜಿಲ್ಲಾ ಕೌಶಲ್ಯ ಅಭಿವೃದ್ಧಿ ಯೋಜನೆಯ 4 ಹಂತದ ಮಾರ್ಗಸೂಚಿಗಳನ್ನು ಭಾಷಾಂತರಗೊಳಿಸಿದ್ದು, ಇನ್ನು 45 ಜಾಬ್‌ರೋಲ್‌ಗಳ ಪಠ್ಯಕ್ರಮಗಳ ಭಾಷಾಂತರ ಕಾರ್ಯ ಪ್ರಗತಿಯಲ್ಲಿರುತ್ತದೆ.

- <u>**ಕಿರು ಉದ್ಯಮಶೀಲತೆ ಕಾರ್ಯಕ್ರಮ (NEP)**</u> : ಹೆಸರೇ ಸೂಚಿಸುವಂತೆ ತಳಮಟ್ಟದ ಕಿರು ಉದ್ಯಮಿಗಳಿಗೆ ಕೌಶಲಗಳನ್ನು ಕಲಿಯಲು ಮತ್ತು ವ್ಯವಹಾರ ಜ್ಞಾನವನ್ನು ಪಡೆಯಲು ಸಹಾಯ ಮಾಡುವ ಉದ್ಯಮಶೀಲತೆಯ ಕಾರ್ಯಕ್ರಮವಾಗಿದ್ದು, 200 ತಳ ಮಟ್ಟದ ಕಿರು ಉದ್ಯಮಿಗಳನ್ನು ಪ್ರೋತ್ಸಾಹಿಸುವ ಹಾಗೂ ಮಹಿಳೆಯರಿಗೆ ವಿಶೇಷ ಗಮನವನ್ನು ನೀಡುವ ಮೂಲಕ ತರಬೇತಿ ಮತ್ತು ಸೌಲಭ್ಯ ವನ್ನು ಒದಗಿಸುವ ಮೂಲಕ ಉದ್ಯಮಶೀಲತೆಯ ಪ್ರತಿಯೊಂದು ಹಂತದಲ್ಲೂ ಇರುವ ಹಲವಾರು ಸವಾಲುಗಳನ್ನು ಎದುರಿಸಲು ಸಹಾಯ ಮಾಡುವುದಾಗಿದೆ.
- <u>**Skill Connect (ಕೌಶಲ್ಯ ಸಂಪರ್ಕ) ಪೋರ್ಟಲ್**</u> : ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮವು ಆಸಕ್ತ ಉದ್ಯೋಗದಾತರು ಹಾಗೂ ಉದ್ಯೋಗಾಂಕ್ಷಿಗಳನ್ನು ಒಂದೇ ವೇದಿಕೆಯಡಿ ತರಲು Skill Connect (ಕೌಶಲ್ಯ ಸಂಪರ್ಕ) ಪೋರ್ಟಲ್ ಅನ್ನು ಸೃಷ್ಟಿಸಿದ್ದು, ಅದನ್ನು ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 29.06.2020 ರಲ್ಲಿ ಉದ್ಘಾಟಿಸಿರುತ್ತಾರೆ.
- <u>**Convergence**</u> : ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮವು ವಿವಿಧ ಇಲಾಖೆಗಳ ಸಹಭಾಗಿತ್ವದೊಂದಿಗೆ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ.

  1) **ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ** : T A P – Talent Acceleration Programme ಮೂಲಕ 2000 ಅಂತಿಮ ವರ್ಷ ಬಿ.ಇ / ಬಿಎಸ್‌ಸಿ/ ಬಿ.ಸಿ.ಎ ವಿದ್ಯಾರ್ಥಿಗಳಿಗೆ ಫ್ಯೂಚರ್ ಸ್ಕಿಲ್ ನಲ್ಲಿ ತರಬೇತಿ ನೀಡಿ ಉದ್ಯೋಗ ಕಲ್ಪಿಸುವ ಕ್ರಮವಹಿಸಲಾಗಿದೆ.

  2) **ಪಂಚಾಯತ್ ರಾಜ್ ಇಲಾಖೆ** : ಸ್ವ ಸಹಾಯ ಸಂಘಗಳ ಮಹಿಳೆಯರಿಗೆ ಘನತ್ಯಾಜ್ಯ ನಿರ್ವಹಣೆಯ ತರಬೇತಿ ಹಾಗೂ ವಾಹನಾ ಚಾಲನಾ ತರಬೇತಿ

  3) **ಪೋಲಿಸ್ ಇಲಾಖೆ** : ಕಾರಾಗೃಹ ವಾಸಿಗಳಿಗೆ ಸ್ವಯಂ ಉದ್ಯೋಗ ಹಾಗೂ ಸ್ವಾವಲಂಬನಾ ತರಬೇತಿ

  4) **ಕೃಷಿ ಇಲಾಖೆ** : ಕೃಷಿ ವಿಜ್ಞಾನ ಕೇಂದ್ರಗಳನ್ನು ತರಬೇತಿ ಪಾಲುದಾರರನ್ನಾಗಿ ಮಾಡಿ ಕೃಷಿ ತರಬೇತಿ ಸೇರಿ ಸ್ವಯಂ ಉದ್ಯೋಗಗಳಲ್ಲಿ ತರಬೇತಿ (organic grower, Agricultural mechanic, seeds grower)

  5) **ಉನ್ನತ ಶಿಕ್ಷಣ ಇಲಾಖೆ** : Vishweshwariah Technical University & Karnataka State Open University ಸಂಸ್ಥೆಗಳು ತರಬೇತಿ ಪಾಲುದಾರರಾಗಿ ಫ್ಯೂಚರ್ ಸ್ಕಿಲ್ ನಲ್ಲಿ ತರಬೇತಿ ನೀಡಲಾಗುತ್ತಿದೆ.
- <u>**Industry Connect (Demand Drives Training)**</u> : Industry Connect ಕಾರ್ಯಕ್ರಮದ ಮೂಲಕ Industry Linkage Cell ಸ್ಥಾಪಿಸಲಾಗಿದ್ದು, ಕೈಗಾರಿಕೆಗಳನ್ನು ತರಬೇತಿ ಪಾಲುದಾರರನ್ನಾಗಿ ಮಾಡಿ ಅವರದೇ ತರಬೇತಿ ಕೇಂದ್ರಗಳ ಮೂಲಕ ಔದ್ಯೋಗಿಕ ಬೇಡಿಕೆಗಳ ಅನುಸಾರವಾಗಿ ಉದ್ಯೋಗ ಒದಗಿಸಲಾಗುತ್ತಿದೆ. (Flipkart, Sansera Technologies, kaynes technologies, Wipro GE, ELCIA, Mysore Industrial Association)
- Skill Gap Study ನಡೆಸಲು GRAAM ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಈ ಸಂಬಂಧ ವಿಸ್ತೃತ ವರದಿಯು ಸಲ್ಲಿಕೆಯಾಗಿರುತ್ತದೆ.
- <u>**ಸ್ಕಿಲ್ ಹಬ್ (Skill Hub)**</u> : ರಾಜ್ಯದ ಯುವಕ-ಯುವತಿಯರಿಗೆ ಒಂದೇ ಸೂರಿನಡಿ ಉದ್ಯೋಗಾವಕಾಶ, ಕೌಶಲ್ಯ ತರಬೇತಿ ಮತ್ತು ಉದ್ಯಮಶೀಲತೆಯ ತರಬೇತಿ ನೀಡಲು ರಾಮನಗರ ಜಿಲ್ಲೆಯಲ್ಲಿ ಪೈಲಟ್ ಆಧಾರದ ಮೇರೆಗೆ ಸ್ಕಿಲ್ ಹಬ್ (Skill Hub) ಅನ್ನು ದಿನಾಂಕ: 03.01.2022 ರಂದು ಸನ್ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟಿಸಿರುತ್ತಾರೆ.
- <u>**Skill on Wheels**</u> : ಕೌಶಲ್ಯಾಭಿವೃದ್ಧಿ ನಿಗಮದ ವತಿಯಿಂದ Skill on Wheels ಯೋಜನೆಯನ್ನು ಪೈಲಟ್ ಆಧಾರದ ಮೇರೆಗೆ ಪ್ರಾರಂಭಿಸಲಾಗುತ್ತಿದ್ದು, ದೂರದ ಹಳ್ಳಿಗಾಡಿನ ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಯುವ ಜನತೆಗೆ ಹಾಗೂ ಇತರೆ ಪ್ರದೇಶಗಳಲ್ಲಿನ ಯುವ ಜನತೆಗೆ ಕೌಶಲ್ಯಾಧಾರಿತ ತರಬೇತಿಯಲ್ಲಿ ಸ್ಥಳದಲ್ಲಿಯೇ ನೀಡುವ ಮಹತ್ವಾಕಾಂಕ್ಷೆಯನ್ನು ಹೊಂದಿರುತ್ತದೆ.

# NRLM

ಅನುಬಂಧ-2

ಕಳೆದ 3 ವರ್ಷಗಳಿಂದ ಇಲಾಖಾ ವತಿಯಿಂದ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಕೈಗೊಂಡಿರುವ ಯೋಜನೆ/ಕಾರ್ಯಕ್ರಮಗಳಿಗೆ ಬಿಡುಗಡೆಯಾದ ಮತ್ತು ಬಳಕೆ ಮಾಡಲಾದ ಅನುದಾನ ವಿವರ:

(ರೂ.ಲಕ್ಷಗಳಲ್ಲಿ)

| ಕ್ರ.ಸಂ. | ಜಿಲ್ಲೆ | 2019-20 | | 2020-21 | | 2021-22 | |
|---|---|---|---|---|---|---|---|
| | | ಬಿಡುಗಡೆ | ವೆಚ್ಚ | ಬಿಡುಗಡೆ | ವೆಚ್ಚ | ಬಿಡುಗಡೆ | ವೆಚ್ಚ |
| ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ -NRLM | | | | | | | |
| 1 | ಬೀದರ್ | 964.58 | 931.97 | 926.59 | 560.77 | 722.93 | 708.95 |
| 2 | ಬಳ್ಳಾರಿ | 166.13 | 511.69 | 1816.04 | 1733.89 | 871.52 | 865.86 |
| 3 | ಕಲಬುರಗಿ | 685.83 | 368.80 | 681.53 | 721.25 | 327.40 | 343.54 |
| 4 | ಕೊಪ್ಪಳ | 882.48 | 886.23 | 293.14 | 247.04 | 2249.52 | 2198.45 |
| 5 | ರಾಯಚೂರು | 426.01 | 357.96 | 204.56 | 215.40 | 1218.57 | 1166.55 |
| 6 | ಯಾದಗಿರಿ | 765.41 | 362.09 | 417.98 | 480.45 | 226.27 | 137.98 |
| 7 | ವಿಜಯನಗರ | - | - | - | - | - | - |
| ದೀನ ದಯಾಳ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ -DDUGKY | | | | | | | |
| 1 | ಬೀದರ್ | - | - | - | - | - | - |
| 2 | ಬಳ್ಳಾರಿ | - | - | - | - | - | - |
| 3 | ಕಲಬುರಗಿ | - | 6.00 | - | - | 2.39 | 2.39 |
| 4 | ಕೊಪ್ಪಳ | - | - | - | - | - | - |
| 5 | ರಾಯಚೂರು | - | - | - | - | - | - |
| 6 | ಯಾದಗಿರಿ | - | 0.50 | - | - | 1.52 | 1.52 |
| 7 | ವಿಜಯನಗರ | - | - | - | - | - | - |
| | | | | | | | |
| ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ-RSETI | | | | | | | |
| 1 | ಬೀದರ್ | - | - | 4.92 | - | - | - |
| 2 | ಬಳ್ಳಾರಿ | - | - | 58.38 | 26.02 | 0.06 | 0.06 |
| 3 | ಕಲಬುರಗಿ | - | 6.00 | 20.88 | - | - | - |
| 4 | ಕೊಪ್ಪಳ | 34.46 | 43.53 | 13.74 | - | 0.06 | 0.06 |
| 5 | ರಾಯಚೂರು | 49.77 | 27.53 | - | 23.16 | - | - |
| 6 | ಯಾದಗಿರಿ | - | - | 15.77 | 0.00 | 0.06 | 0.06 |
| 7 | ವಿಜಯನಗರ | - | - | - | - | - | - |

## Day-NULM

### Annexure-3

(Amount in Rs.)

| SL. NO. | DISTRICT | Releases | | | Expenditure | | |
|---|---|---|---|---|---|---|---|
| | | 2019-20 | 2020-21 | 2021-22 | 2019-20 | 2020-21 | 2021-22 |
| 1 | 2 | 3 | 4 | 5 | 6 | 7 | 8 |
| 1 | KALABURGI | 8600853.00 | 5263614.00 | 24442530.00 | 21948000.00 | 13156873.00 | 4299924.00 |
| 2 | YADGIR | 3171261.00 | 4776866.00 | 6694540.00 | 5418811.00 | 8453257.70 | 1002540.00 |
| 3 | RAICHUR | 7878161.00 | 2295000.00 | 7486390.00 | 8912413.00 | 6163391.76 | 1787054.00 |
| 4 | KOPPAL | 8000000.00 | 3895000.00 | 4025025.00 | 6243000.00 | 10920663.40 | 1096522.00 |
| 5 | BIDAR | 4439070.00 | 1380000.00 | 8856104.00 | 7415257.00 | 5745675.00 | 579046.00 |
| 6 | BELLARY | 5050000.00 | 6371705.00 | 29629848.00 | 12364000.00 | 8527839.45 | 4089209.00 |
| | **Total** | **37139345.00** | **23982185.00** | **81134437.00** | **62301481.00** | **52967700.31** | **12854295.00** |

## NRLM

ಅನುಬಂಧ-4

### ಈ ಯೋಜನೆ ಸದುಪಯೋಗ ಪಡಿಸಿಕೊಂಡ ಫಲಾನುಭವಿಗಳ ಸಂಖ್ಯೆ ವಿವರ

### ಸ್ವಸಹಾಯ ಗುಂಪಿನ ಸದಸ್ಯರ ವಿವರ

| ಕ್ರ.ಸಂ. | ಜಿಲ್ಲೆ | ರಚಿಸಲಾಗಿರುವ ಸ್ವಸಹಾಯ ಗುಂಪುಗಳು | | | ಸಮುದಾಯ ಬಂಡವಾಳ ನಿಧಿ ಪಡೆದ ಸ್ವಸಹಾಯ ಗುಂಪುಗಳ ಸಂಖ್ಯೆ | | | ಸುತ್ತು ನಿಧಿ ಪಡೆದ ಸ್ವಸಹಾಯ ಗುಂಪುಗಳ ಸಂಖ್ಯೆ | | |
|---|---|---|---|---|---|---|---|---|---|---|
| | | 2019-20 | 2020-21 | 2021-22 | 2019-20 | 2020-21 | 2021-22 | 2019-20 | 2020-21 | 2021-22 |
| 1 | ಬಳ್ಳಾರಿ | 712 | 580 | 654 | 0 | 1451 | 367 | 0 | 0 | 220 |
| 2 | ಬೀದರ್ | 1354 | 1646 | 1176 | 856 | 748 | 682 | 0 | 0 | 352 |
| 3 | ಕಲಬುರಗಿ | 1631 | 783 | 883 | 582 | 512 | 193 | 0 | 0 | 484 |
| 4 | ಕೊಪ್ಪಳ | 656 | 301 | 369 | 716 | 63 | 2309 | 0 | 0 | 308 |
| 5 | ರಾಯಚೂರು | 1034 | 408 | 827 | 326 | 131 | 732 | 0 | 0 | 308 |
| 6 | ವಿಜಯನಗರ | 1426 | 761 | 804 | 0 | 0 | 467 | 0 | 0 | 264 |
| 7 | ಯಾದಗಿರಿ | 584 | 132 | 392 | 660 | 312 | 95 | 0 | 0 | 264 |

### ದೀನ ದಯಾಳ ಉಪಾದ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯ-ಡಿಡಿಯುಜಿಕೆವೈ:

| ಕ್ರ.ಸಂ. | ಜಿಲ್ಲೆ | ಫಲಾನುಭವಿಗಳ ವಿವರ | | | | | |
|---|---|---|---|---|---|---|---|
| | | 2019-20 | | 2020-21 | | 2021-22 | |
| | | ತರಬೇತಿ ಪಡೆದವರು | ಉದ್ಯೋಗ ಪಡೆದವರು | ತರಬೇತಿ ಪಡೆದವರು | ಉದ್ಯೋಗ ಪಡೆದವರು | ತರಬೇತಿ ಪಡೆದವರು | ಉದ್ಯೋಗ ಪಡೆದವರು |
| 1 | ಬೀದರ್ | 56 | 26 | 113 | 46 | 15 | 15 |
| 2 | ಬಳ್ಳಾರಿ | 86 | 27 | 223 | 126 | 80 | 27 |
| 3 | ಕಲಬುರಗಿ | 108 | 36 | 200 | 116 | 175 | 15 |
| 4 | ಕೊಪ್ಪಳ | 31 | 6 | 98 | 2 | 95 | 24 |
| 5 | ರಾಯಚೂರು | 197 | 57 | 260 | 134 | 63 | 47 |
| 6 | ಯಾದಗಿರಿ | 64 | 9 | 77 | 36 | 53 | 5 |
| 7 | ವಿಜಯನಗರ | 0 | 0 | 0 | 0 | 0 | 0 |

### ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ:

| ಕ್ರ.ಸಂ. | ಜಿಲ್ಲೆ | ಫಲಾನುಭವಿಗಳ ಸಂಖ್ಯೆ | | |
|---|---|---|---|---|
| | | 2019-20 | 2020-21 | 2021-22 |
| 1 | ಬೀದರ್ | 930 | 552 | 217 |
| 2 | ಬಳ್ಳಾರಿ | 746 | 428 | 239 |
| 3 | ಕಲಬುರಗಿ | 442 | 178 | 123 |
| 4 | ಕೊಪ್ಪಳ | 683 | 515 | 224 |
| 5 | ರಾಯಚೂರು | 667 | 418 | 399 |
| 6 | ಯಾದಗಿರಿ | 390 | 146 | 222 |
| 7 | ವಿಜಯನಗರ | 0 | 0 | 0 |

| Day-NULM | | | | | |
|---|---|---|---|---|---|
| Annexure-5 | | | | | |
| **SL. NO.** | **Components** | | **2019-20** | **2020-21** | **2021-22** |
| **1** | **2** | | **3** | **4** | **5** |
| **1** | **EST&P** | **No. of Candidates Trained** | 5400 | 6647 | 13049 |
| **2** | **SEP** | **No. of Beneficiary details** | 4838 | 4547 | 11138 |
| **3** | **SM&ID** | **No.of SHG** | 2059 | 1228 | 2361 |
| | | **No.of Beneficiary** | 21391 | 12806 | 23782 |